

ಡಾ.ವಿನೋದ ಛೆಬ್ಬಿ

**ಪರಸಂಬಂಧವನ್ನು ಬಿಡದ ಸಂಗಾತಿಯೊಡನೆ ಬದುಕಬೇಕು ಎನ್ನುವುದು ಆತ್ಮಹೀನತೆಯ ಲಕ್ಷಣ!**

# 151: ಪರಸಂಬಂಧ-14

ಪರಸಂಬಂಧದ ದುರಂತದಲ್ಲಿ ನೊಂದ ಸಂಗಾತಿಗೆ ಎಡವಿದ ಸಂಗಾತಿಯು ಹೇಗೆ ನೆರವು ನೀಡಬಹುದು ಎಂದು ಹೋದಸಲ ಚರ್ಚಿಸಿದೆವು. ಈ ಸಲ ನೊಂದ ಸಂಗಾತಿಯು ಕೈಗೊಳ್ಳಬಹುದಾದ ನಿರ್ಧಾರಗಳ ಬಗೆಗೆ ಯೋಚಿಸೋಣ.

ಇಷ್ಟು ದಿನ ತನ್ನವರು ಎನ್ನಿಸಿಕೊಂಡವರು ತನ್ನವರಲ್ಲ ಎಂದಾಗ ನೊಂದ ಸಂಗಾತಿಯ ತಲೆಯಲ್ಲಿ ಕೋಪ- ಸಂತಾಪಗಳ ಬಿರುಗಾಳಿ ಏಳುತ್ತದೆ. ಭಾವನೆಗಳು, ಅನಿಸಿಕೆಗಳು ಹಾಗೂ ವಿಚಾರಗಳು ತಲೆಯಲ್ಲಿ ತೀವ್ರವಾಗಿ ಮಥಿಸುತ್ತವೆ. ಆಗ ಬರುವ ಮೊದಲ ವಿಚಾರವೆಂದರೆ, ಸಂಬಂಧವನ್ನು ಸರಿಪಡಿಸುವುದೋ ಅಥವಾ ಮುರಿದುಕೊಳ್ಳುವುದೋ ಎನ್ನುವ ದ್ವಂದ್ವ. ಯಾವುದೇ ನಿರ್ಧಾರವು 'ನನಗೇನು ಅನ್ನಿಸುತ್ತದೆ' ಎನ್ನುವುದರ ಮೇಲೆ ಅವಲಂಬಿಸಿರುತ್ತದೆ. ಆದರೆ ಈ ಅನಿಸಿಕೆಯ ಮೇಲೆ ತೀವ್ರಭಾವನೆಗಳ ಪ್ರಭಾವವಿದ್ದು ವಾಸ್ತವದ ಆಧಾರ ಇರುವುದಿಲ್ಲ. ಹೀಗಾಗಿ ಭಾವನೆಗಳ ತೀವ್ರತೆಯನ್ನು ಅನುಸರಿಸಿ ಕೈಗೊಳ್ಳುವ ನಿರ್ಧಾರಗಳಿಂದ ಪ್ರಯೋಜನವಿಲ್ಲ.

ಜಾನಿಸ್ ಸ್ಪ್ರಿಂಗ್ After the Affair ಪುಸ್ತಕದಲ್ಲಿ ಮಹತ್ವದ ಮಾತೊಂದನ್ನು ಹೇಳಿದ್ದಾಳೆ. ಪರಸಂಬಂಧದ ದ್ರೋಹಕ್ಕೆ ಒಳಗಾದ ಹೆಚ್ಚಿನವರು– ಅದರಲ್ಲೂ ಮಹಿಳೆಯರು– ಎರಡು ರೀತಿಯ ಪ್ರತಿಕ್ರಿಯೆಗಳನ್ನು ತೋರಿಸುತ್ತಾರೆ. ಒಂದು: ಒಟ್ಟಿಗಿರಲು ನಿರ್ಧರಿಸುವುದು, ಹಾಗೂ ಈ ಪ್ರಕರಣವೇ ನಡೆದಿಲ್ಲವೆಂಬಂತೆ ಪೂರ್ತಿ ಮರೆತುಬಿಡುವುದು. ಇಲ್ಲಿ ನೊಂದವರು ತಪ್ಪಿತಸ್ಥರು ಕೊಡುವ ಭರವಸೆಯನ್ನು ಸಾರಾಸಗಟಾಗಿ ನಂಬುತ್ತಾರೆಯೇ ವಿನಾ ಪರಸಂಬಂಧದ ಆಳಗಲಗಳ ವಿಮರ್ಶೆ ಮಾಡುವುದಿಲ್ಲ. ಪರಿಣಾಮ? ಕುಟುಂಬದಲ್ಲಿ ಶಾಂತಿಯೇನೋ ನೆಲೆಸುತ್ತದೆ. ಆದರೆ ಅಂತರಂಗದ ತಳಮಳ ಮುಂದುವರಿಯುತ್ತದೆ. ಎರಡು: ಪರಸಂಬಂಧವನ್ನು ನಿಲ್ಲಿಸದೆ ಮುಂದುವರಿಸುವವರ ಜೊತೆಗೆ ಸಹಬಾಳುವೆ ಮಾಡುವುದು. ಇಲ್ಲಿ ಸಮಸ್ಯೆಯು ಜೀವಂತ ಇರುವುದರಿಂದ ನೊಂದವರ ಅಪನಂಬಿಕೆ ಹಾಗೂ ಕೋಪತಾಪ ಕಡಿಮೆಯಾಗುವುದಿಲ್ಲ. ಹಾಗಾಗಿ ಪರಸಂಬಂಧವನ್ನು ಮರೆತುಬಿಟ್ಟು, ಅಥವಾ ಅದು ಮುಂದುವರಿಯುತ್ತಿರುವಾಗ ನೆಮ್ಮದಿಯ ಸಹಬಾಳುವೆ ಸಾಧ್ಯವಿಲ್ಲ. ಇನ್ನು, ಮೂರನೆಯ ಆಯ್ಕೆಯೂ ಇದೆ: ನೊಂದವರು ತಾನೂ ಪರಸಂಬಂಧಕ್ಕೆ ಕೈಹಾಕುವುದು – ಆದರೆ ಇದು ನಮ್ಮಲ್ಲಿ ಬಹಳ ಅಪರೂಪ. ಗಂಡನ ಪರಸಂಬಂಧವನ್ನು ಪ್ರತಿಭಟಿಸುತ್ತ ಹೆಂಡತಿಯು, 'ನಿಮ್ಮ ತರಹ ನಾನೂ ಸಂಬಂಧ ಇಟ್ಟುಕೊಂಡರೆ ನಿಮಗೆ ಹೇಗೆ ಅನ್ನಿಸುತ್ತದೆ?' ಎಂದು ಕೆಣಕಿದಾಗ ಅವನು ಹಗುರವಾಗಿ 'ಇಟ್ಟುಕೋ, ನನಗೇನೂ ಅಡ್ಡಿಯಿಲ್ಲ.' ಎನ್ನುತ್ತಾನೆ. ಯಾಕೆ? ಇದು ಹೆಂಡತಿಯ ಮೌಲ್ಯಗಳಿಗೆ ವಿರುದ್ಧ ಎನ್ನುವ ನಂಬಿಕೆ ಅವನಿಗಿದೆ! (ಹಾಗಾದರೆ, ದಾಂಪತ್ಯದ ಸಂಗಾತಿಯ ಜೊತೆಗಿದ್ದೂ ಇಬ್ಬರೂ ಒಪ್ಪುವ ಪರಸಂಬಂಧವು ಸಾಧ್ಯವಿಲ್ಲವೆ? ಸಾಧ್ಯವಿದೆ. ಉದಾಹರಣೆಗೆ, ಇಬ್ಬರಲ್ಲಿ ಒಬ್ಬರು ಮಾನಸಿಕ ಅಥವಾ ಶಾರೀರಿಕ ನ್ಯೂನತೆಯಿಂದ ಹೊಂದಿದ್ದು, ಕಾಮಕೂಟದಲ್ಲಿ ಪಾಲುಗೊಳ್ಳಲು ಸಾಧ್ಯವಿಲ್ಲ ಎಂದುಕೊಳ್ಳಿ. ಆಗ ಅವರ ದಿನನಿತ್ಯದ ಹಾಗೂ ಭಾವನಾತ್ಮಕ ಅಗತ್ಯಗಳನ್ನು ನೋಡಿಕೊಳ್ಳುವ ಸಂಗಾತಿಯ ಲೈಂಗಿಕ ಬಯಕೆಗಳನ್ನು ಪೂರೈಸಲು ಹೊರಗಿನ ವ್ಯಕ್ತಿಯಿಂದ ಮಾತ್ರ ಸಾಧ್ಯ. ಇಂಥ ಪ್ರಸಂಗದಲ್ಲಿ ಮಾತ್ರ ಹೊರಸಂಬಂಧಕ್ಕೆ ಅನಿವಾರ್ಯ ಅವಕಾಶವಿದೆ.)

ನನ್ನ ಗಮನಕ್ಕೆ ಬಂದ ಪರಸಂಬಂಧದ ಪ್ರಕರಣಗಳಲ್ಲಿ ನೊಂದ ಸಂಗಾತಿಯು ತಪಿತಸ್ಥರನ್ನು ಸರಿದಾರಿಗೆ ತರಲು ಹೆಣಗುವುದು ಸಾಮಾನ್ಯವಾಗಿ ಕಂಡುಬಂದಿದೆ. ಇದರಲ್ಲಿ ಮಹಿಳೆಯರದೇ ಸಿಂಹಪಾಲು. ಇವರಲ್ಲೊಂದು ವಿಶೇಷ ಗುಣವನ್ನು ಕಂಡಿದ್ದೇನೆ. ತನ್ನವನು ತನ್ನನ್ನು ನಿರ್ಲಕ್ಷಿಸಿ ಇನ್ನೊಬ್ಬಳಿಗೆ ಗಟ್ಟಿಯಾಗಿ ಕಚ್ಚಿಕೊಂಡಿದ್ದರೂ ಬಿಡಿಸಿಕೊಂಡು ಬರುತ್ತೇನೆ ಎನ್ನುವ ಎನ್ನುವ ಸತಿ ಸಾವಿತ್ರಿಯ ಛಲ ನಮ್ಮ ಸ್ತ್ರೀಯರಲ್ಲಿ ವ್ಯಾಪಕವಾಗಿದೆ. ಸಮಾಜಮುಖೀ ಕಾರಣಗಳನ್ನು ಬದಿಗಿಟ್ಟು ನೋಡಿದರೆ ಇದರೊಳಗೆ ಏನಿದೆ? ಇವರು, 'ನಾನು ಗಂಡನನ್ನು ನಿಜವಾಗಿ ಪ್ರೀತಿಸುತ್ತೇನೆ. ನಾನು ಪ್ರೀತಿಸುವವನು ಹೇಗೆಯೇ ಇರಲಿ, ಅದು ನನಗೆ ಹಿತ!' ಎಂದುಕೊಳ್ಳುತ್ತಾರೆ. 'ಎಷ್ಟೊಂದು ಹಿಂಸೆಯನ್ನು ಸಹಿಸಿಕೊಳ್ಳುತ್ತಿದ್ದೀಯಲ್ಲ?' ಎಂದರೆ 'ಹೌದು, ನನ್ನ ಪ್ರೀತಿ ಅಷ್ಟೊಂದು ಗಾಢವಾಗಿದೆ!' ಎಂದು ಸಪ್ಪಗಿನ ಸಮರ್ಥನೆ ಕೊಡುತ್ತಾರೆ.

ಪ್ರೀತಿಯ ಬಗೆಗೆ ಮಾತಾಡುವವರಿಗೆ ನಾನಿಲ್ಲಿ ಒಂದು ಮಾತು ಹೇಳಲೇಬೇಕು.

ಪ್ರೀತಿ ಎರಡು ಬಗೆಯದಾಗಿದೆ. ಒಂದು: ಪ್ರತಿಫಲವಿಲ್ಲದ ಪ್ರೀತಿ. ಸಂಗಾತಿಯ ಬಗೆಗೆ ನಿಮ್ಮಲ್ಲಿ ಎಷ್ಟೊಂದು ಸೆಳೆತವಿದೆ ಎಂದರೆ, ನಮ್ಮಿಬ್ಬರ ಸಂಬಂಧ ಹೇಗೇ ಇದ್ದರೂ ಸರಿ, ನನ್ನ ಗಂಡ ಮೂರನೆಯವಳನ್ನು ಬಿಡಬೇಕು ಎನ್ನುವುದೊಂದೇ ಇದರ ಉದ್ದೇಶ. ಇಲ್ಲಿ ಕೆಲಸ ಮಾಡುತ್ತಿರುವುದು ನಿಮ್ಮ ಸೆಳೆತವೇ ವಿನಾ ನಿಮಗೆ ಪ್ರತಿಯಾಗಿ ನಿಮ್ಮ ಸಂಗಾತಿಯ ಸ್ಪಂದನೆಯಲ್ಲ. ಹಾಗಾಗಿ ಇದು ಏಕಮುಖಿ ಪ್ರೀತಿ, ಪ್ರತಿಫಲ ಇಲ್ಲದ ಪ್ರೀತಿ! ಇದರ ಹಿಂದೆ ಒಂದು ಅನಿಸಿಕೆಯೂ ಇದೆ: 'ನಾನು ನನ್ನವನಿಗೆ ಸಾಕಷ್ಟು ಪ್ರೀತಿ ಕೊಡಲಿಲ್ಲವೇನೋ? ಅಥವಾ ಅವನು ನನ್ನನ್ನು ನಡೆಸಿಕೊಂಡ ರೀತಿಯು ನನಗೆ ಇಷ್ಟವಾಗಲಿಲ್ಲವೆಂದು ತೋರಿಸಿರಬಹುದು. ಹಾಗಾಗಿ ತಪ್ಪು ನನ್ನದೆ. ಇದನ್ನು ನಾನೇ ತಿದ್ದಿಕೊಳ್ಳಬೇಕು.' ನೀವು ಹೀಗೆ ಯೋಚಿಸುತ್ತಿದ್ದರೆ ಕಾಣದ ಸತ್ಯವೊಂದಕ್ಕೆ ಕುರುಡಾಗಿದ್ದೀರಿ: ನಿಮ್ಮ ಸಂಗಾತಿಯು ನಿಮ್ಮನ್ನು ಯಾವ ರೀತಿ ನಿರ್ಲಕ್ಷಿಸಿದ್ದಾರೆ ಎನ್ನುವುದಕ್ಕೆ ಅವರ ಪರಸಂಬಂಧವೇ ಸಾಕ್ಷಿ ಎಂಬ ಸತ್ಯವನ್ನು ಏನೇ ಮಾಡಿದರೂ ಅಲ್ಲಗಳೆಯಲಾರಿರಿ!

ಈ ಮಿಥ್ಯಾ ಪ್ರೀತಿಗೆ ಹಿನ್ನೆಲೆಯಿದೆ. ನನ್ನ ಸಂಗಾತಿ ಮರಳಿದರೆ ನನಗೇನು ಪ್ರಯೋಜನವಿದೆ ಎಂದು ನೀವು ಯೋಚಿಸಲು ಹೋಗುವುದಿಲ್ಲ. ಯಾಕೆ? ನಿಮ್ಮ ಆತ್ಮಪ್ರತಿಷ್ಠೆಯು ನೆಲಕಚ್ಚಿರುತ್ತದೆ! ನಿಮ್ಮ ಅನರ್ಹತೆಯ ಬಗೆಗೆ ನಿಮ್ಮ ಅನಿಸಿಕೆ ಎಷ್ಟೊಂದು ಶೋಚನೀಯವಾಗಿರುತ್ತದೆ ಎಂದರೆ ಇದಕ್ಕಿಂತ ಉತ್ತಮವಾದವನನ್ನು ಪಡೆಯಲು ನನಗೆ ಯೋಗ್ಯತೆಯಿಲ್ಲ ಎಂದುಕೊಳ್ಳುತ್ತೀರಿ. ಸಿಕ್ಕಿದ್ದೇ ಭಾಗ್ಯ, ನನ್ನ ಹಣೆಬರಹವೇ ಇಷ್ಟು ಎನ್ನುವುದು ನಿಮ್ಮ ತಲೆಯಲ್ಲಿ ಭದ್ರವಾಗಿ ತಳವೂರಿರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, 'ನನ್ನ ಬಯಕೆಗಳು ಹಾಗೂ ಅಗತ್ಯಗಳು ಏನೇನಿವೆ? ಅವುಗಳಲ್ಲಿ ಯಾವುವು ಈ ಸಂಬಂಧದಲ್ಲಿ ನೆರವೇರಿವೆ? ಏನೇನನ್ನು ನಿರಾಕರಿಸಿ ತುಳಿಯಲಾಗಿದೆ?' ಎನ್ನುವುದರ ಬಗೆಗೆ ಬುದ್ಧಿ ಓಡುವುದೇ ಇಲ್ಲ! ಇನ್ನು, 'ನನ್ನ ಸಂಗಾತಿಯು ನನ್ನನ್ನು ಅರ್ಥ ಮಾಡಿಕೊಂಡು ನನ್ನಿಷ್ಟದಂತೆ ಬದಲಾವಣೆ ಆಗಲು ತಯಾರಾಗುತ್ತಾರೆಯೆ?' ಎಂದು ಯೋಚಿಸುವುದಂತೂ ದೂರದ ಮಾತು!

ಇಲ್ಲೊಬ್ಬಳು ದಾರಿತಪ್ಪಿದ ಗಂಡನನ್ನು ಮರಳಿ ಪಡೆಯುವುದಕ್ಕೆ ಹಲವಾರು ಆಪ್ತಸಲಹೆಗಾರ್ತಿಯರನ್ನು ಸಂದರ್ಶಿಸಿ, ಅವರು ಹೇಳಿದ ಸಲಹೆಗಳನ್ನು (ಉದಾ. 'ಗಂಡನು ಕೇಳಿದ್ದೆಲ್ಲವನ್ನೂ ಪೂರೈಸಬೇಕು. ನಾನೂ ಹಾಗೆಯೇ ಮಾಡಿದ್ದು.') ಚಾಚೂ ತಪ್ಪದೆ ಅನುಸರಿಸಿ, ಪ್ರಯೋಜನವಾಗದೆ ನನ್ನಲ್ಲಿ ಬಂದಿದ್ದಳು. ಗಂಡನಿಗೆ ಅವನ ಖಾಸಗಿ ವಿಷಯದ ಬಗೆಗೆ ಪ್ರಶ್ನೆ ಕೇಳಕೂಡದು, ಹಾಗಿದ್ದರೆ ತನ್ನೊಡನೆ ಖುಷಿಯಾಗಿರುತ್ತಾನೆ ಎಂದಳು. ಅವನು ಕೆಲವೊಮ್ಮೆ ಸಲ ಫೋನಾಯಿಸಿ, "ಇವೊತ್ತು ಕೆಲಸ ತುಂಬಾ ಇದೆ, ರಾತ್ರಿ ಮನೆಗೆ ಬರುವುದಿಲ್ಲ" ಎಂದು ಹೇಳಿಬಿಡುತ್ತಾನಂತೆ. ಮರುದಿನ ಬೆಳಿಗ್ಗೆ ಹೂಗುಚ್ಛ, ಸಿಹಿತಿಂಡಿಯೊಡನೆ ಮರಳುತ್ತಾನೆ ಎನ್ನುತ್ತ, ಜೊತೆಗೆ ತಂದಿದ್ದ ಸಿಹಿತಿಂಡಿಯ ಡಬ್ಬವನ್ನು ತೆರೆದು ತೋರಿಸಿದಳು. ಅರ್ಧ ಕೇಜಿ ಡಬ್ಬದಲ್ಲಿ ಕಾಲು ಕೇಜಿ ತಿಂಡಿ ಮಾತ್ರ ಇರುವುದನ್ನು ಆಕೆಯ ಗಮನಕ್ಕೆ ತಂದಾಗ ಅರ್ಥವಾಗಿ ಅತ್ತಳು.

ಇನ್ನೊಂದು ರೀತಿಯ ಪ್ರೀತಿಯನ್ನು ಮುಂದಿನ ಸಲ ನೋಡೋಣ.